Remissions of Land Revenue.

Q.—397. **Sri T. NAGAPPA** (Tarikere).—

Will the Government be pleased to state :—

(*a*) the steps taken by them for granting remission of land revenue in places where crops have failed due to absence of rains in the State ;

(*b*) if no steps have been taken, whether they would do so immediately ?

A.—**Sri Kadidal MANJAPPA** (Minister for Revenue and Public Works).—

(*a*) Remission of one half and the suspension of the other half of dry and wet assessment have been sanctioned in taluks where the dry and wet crops have failed due to scanty rainfall during 1951-52. The adoption of similar measures this year is under consideration.

(*b*) Local Officers are suitably instructed in the matter so far as remissions for 1951-52 are concerned. For 1952-53, action will be taken in proper time after harvest season is over.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಎಕರೆಗೆ ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಖರ್ಚಾಗಬಾರದೆಂಬ ನೀತಿಯಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಸಂದರ್ಭಗಳಲ್ಲಿ ಸಾವಿರ ರೂಪಾಯಿ ಕೂಡ ಜಾಸ್ತಿ ಎಂಬುದು ನಮ್ಮ ಅಭಿಪ್ರಾಯ.

ಶ್ರೀ ಟಿ. ನಾಗಪ್ಪ (ತರೀಕೆರೆ).–ಹೋದ ವರ್ಷ ಅರ್ಧ ಕಂದಾಯ ಮಾಫಿ ಮಾಡಿದೆಯೆಂದು ಹೇಳಿದೆ. ಈ ವರ್ಷ ಪೂರ್ತಿ ಮಾಫಿ ಮಾಡುವುದಕ್ಕೆ ಸಾಧ್ಯವೆ ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್ ಪ್ರಕಾರ ಏನು ಮಾಡಬಹುದೋ ಅದನ್ನು ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಕಂದಾಯ ಮಾಫಿ ಮಾಡುವಾಗ ಬಿಷ್ಟಿ ತರಿ ಬೆಳೆಯ ಪ್ರಮಾಣವನ್ನು ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆಯೊ ಅಥವಾ ಆಯಾ ವರ್ಷದ ಮಳೆಯ ಪ್ರಮಾಣವನ್ನು ತೆಗೆದುಕೊಳ್ಳಲಾಗುತ್ತದೆಯೋ ?

ಶ್ರೀ ಕಡಿದಾಳ್ ಮಂಜಪ್ಪ.—ಮಳೆ ಬೆಳೆ ಎಲ್ಲವನ್ನೂ ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಯು ಎಂ. ಮಾದಪ್ಪ.—ಬೆಳೆಯ ಪ್ರಮಾಣವನ್ನು ತೆಗೆದುಕೊಳ್ಳುವಾಗ ಗ್ರಾಮಾಧಿಕಾರಿಗಳು ಕೊಟ್ಟ ವರದಿಯಲ್ಲಿ ನಾಲ್ಕಾಣೆ ಭಾಗಕ್ಕಿಂತ ಕಡಮೆ ಬೆಳೆಯಾಗಿದೆಯೆಂದು ಬರೆದಾಗ, ಜಮಾಬಂದಿ ಕಾಲದಲ್ಲಿ ಅಧಿಕಾರಿಗಳು ಶಹಭಾಸ್‌ಗಿರಿ ತೆಗೆದುಕೊಳ್ಳುವುದಕ್ಕಾಗಿ ಅದನ್ನು ಬದಲಾವಣೆ ಮಾಡಿ ಹೆಚ್ಚು ಮಾಡಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ. ನಿರ್ದಿಷ್ಟವಾದ ಸಂದರ್ಭಗಳಿದ್ದರೆ ನಮ್ಮ ಗಮನಕ್ಕೆ ತರಬಹುದು.

ಶ್ರೀ ಯು. ಎಂ. ಮಾದಪ್ಪ.—1944ನೆಯ ಇಸವಿಯಿಂದ ಇದುವರೆಗೆ ತಿದ್ದಿಸಿದ್ದರೆ ಮಾಫಿ ಕೊಡುತ್ತೀರಾ ?

Sri Kadidal MANJAPPA.—It is purely hypothetical.

ಶ್ರೀ ಯು. ಎಂ. ಮಾದಪ್ಪ.—ತಮ್ಮ ಗಮನಕ್ಕೆ ತರುವುದಾದರೆ ಮಾಡುತ್ತೀರಾ ?

Mr. SPEAKER.—He has already answered that. Any other supplementary ?

ಶ್ರೀ ಎಸ್. ಎಂ. ಮರಿಯಪ್ಪ (ಪಿರಿಯಾಪಟ್ಟಣ).—ಮೈಸೂರು ಜಿಲ್ಲೆಯಲ್ಲಿ 1951-52ರಲ್ಲಿ ಎಷ್ಟು ಮಾಫಿ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

Mr. SPEAKER.—This is a general question.

Restoration of Minor Tanks.

Q.—508. **Sri D. R. KARI GOWDA** (Hassan).—

Will the Government be pleased to state :—

(*a*) the amount provided for the restoration of minor tanks during the current year ;

(*b*) the amount allotted to each district ;

(*c*) whether the *atchkatdars* will have to pay any amount for the restoration of minor tanks ?

A.—**Sri Kadidal MANJAPPA** (Minister for Revenue and Public Works).—

(*a*) Rs. 10·00 lakhs,

		Rupees in lakhs.
(*b*) Kolar	...	2·0
Bangalore	...	1·0
Tumkur	...	1·0
Shimoga	...	2·75
Hassan	...	0·50
Chitaldrug	...	0·25
Mysore	...	1·50
Mandya	...	0·50
Chikmagalur	...	0·50
Total	...	10·00

(*c*) Yes, as per the Irrigation Act.

ಶ್ರೀ . ಆರ . ಕರಿಗೌಡ.—ಕಡಮೆ ಕರೆಗಳಿರುವ ಬೇರೆ ಡಿಸ್ಟ್ರಿಕ್ಟುಗಳಿಗೆ ಹೆಚ್ಚು ಹಣವನ್ನೊದಗಿಸಿ 3,370 ಕೆರೆಗಳಿರುವ ಹಾಸನ ಡಿಸ್ಟ್ರಿಕ್ಟಿಗೆ ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕೆ 50 ಸಾವಿರ ರೂಪಾಯಿ ಮಾತ್ರ ಒದಗಿಸಿದ್ದೀರಿ ಕಾರಣವೇನು ?